**ಓ ಎಸ್ ನಂಃ 48/2016**
**ಪಿ ಡಬ್ಲ್ಯೂ ಃ 1**

**ದಿಃ 26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ ಎಂ ವಕೀಲರಿಂದಃ-**

ಈ ದಾವೆಯ ಎಲ್ಲಾ ಸಂಗತಿಗಳು ನನಗೆ ಗೊತ್ತು. ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ದಾವಾ ಷೆಡ್ಯೂಲ್ ಸರ್ವೆ ನಂ. ನಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 16 ಎಕರೆ ಇದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ. ನಲ್ಲಿ ಎಷ್ಟು ಪೋಡಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ರಂಗಸ್ವಾಮಯ್ಯನವರಿಗೆ ದಾವಾ ಸ್ವತ್ತು ಮರು ಮಂಜೂರಾಗಿರುವ ಬಗ್ಗೆ ತಾವೇನಾದರೂ ದಾಖಲಾತಿಯನ್ನು ನೋಡಿದ್ದೀರ ಎಂದರೆ ಸಾಕ್ಷಿಯು ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಾವು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ರಂಗಸ್ವಾಮಯ್ಯನವರಿಗೆ ಮರು ಮಂಜೂರಾಗಿರುವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮರು ಮಂಜೂರಾತಿ ಆಧಾರದ ಮೇರೆಗೆ ರಂಗಸ್ವಾಮಯ್ಯನವರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿದ್ದಾರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ರಂಗಸ್ವಾಮಯ್ಯನವರ ಹೆಸರಿಗೆ ಖಾತೆ ವರ್ಗಾವಣೆ ಆಗಿರುವುದಿಲ್ಲ ಆದ್ದರಿಂದ ಸದರಿ ವಿಚಾರಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸರಿಯಲ್ಲ. ದಿಃ 26.11.1975 ರಂದು ಉಪ ವಿಭಾಗಾಧಿಕಾರಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ರಂಗಸ್ವಾಮಯ್ಯನವರಿಗೆ ಮರು ಮಂಜೂರಾತಿ ಆದೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ರಂಗಸ್ವಾಮಯ್ಯ ಮತ್ತು ರಾಮಚಂದ್ರ ರವರಿಗೆ ಯಾವ ರೀತಿ ಸಂಬಂಧ ಎಂದರೆ ಸಾಕ್ಷಿಯು ಒಂದೇ ವಂಶಸ್ಥರು ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವೇನಾದರೂ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**